
ಮೂಡುತ್ತದೆ. ಕೇವಲ ಶಬ್ದ ಚಮತ್ಕಾರಗಳು ನಮ್ಮನ್ನು ಎಲ್ಲಿಗೆ ನಿಲ್ಲಿಸುತ್ತವೆ?. ಆದರೆ, ಗ್ರಾಮ ಮೂಲದ 'ಗ್ರಾಂಟು', 'ಮಡ್ಡಕ್ಕಿ', 'ಧರಣಿ ಮಂಡಲದ ಎಲ್ಲಾ ಮೂಲೆಯೊಳಗೆ', 'ಮುಳ್ಳು' ಇತ್ಯಾದಿ ಕಥೆಗಳ ಮನುಷ್ಯರು ತಮ್ಮ ಬದುಕಿನ ಸಂಕಟ, ದುಗುಡಗಳ ನಡುವೆ ಜೀವನಪ್ರೀತಿಯನ್ನು ಕಾಪಾಡಿಕೊಳ್ಳುತ್ತಾರೆ.

ಹಳ್ಳಿಯ ಮುಗ್ಧತೆ ಮತ್ತು ಒಳರಾಜಕಾರಣಗಳ ಮುಖಾಮುಖಿಯನ್ನು ದಯಾನಂದ ಕೆಲ ಕಥೆಗಳಲ್ಲಿ ಸರಿಯಾಗಿ ಹಿಡಿಯಲು ಯತ್ನಿಸುತ್ತಾರೆ. ತಮ್ಮ ಅನುಭವಗಳನ್ನು ಹೆಚ್ಚು ನಿಕಷಕ್ಕೆ ಒಡ್ಡುವುದು ಇಂಥ ಜಾಗಗಳಲ್ಲಿ ಮಾತ್ರ. 'ತ್ರೀ ಪಾಯಿಂಟ್ ಫೈವ್' ಕಥೆ ಕೇವಲ ಹೆಣ್ಣೊಬ್ಬಳ ಕಷ್ಟಗಳನ್ನು ಹೇಳುವ ಧಾರಾವಾಹಿ ತಂತ್ರವನ್ನು ರೂಢಿಸಿಕೊಂಡಿದೆ. ವಲಸೆ ಮನಸ್ಥಿತಿ ಮತ್ತು ದಲಿತ ಜಗತ್ತಿನ ಮಾನಸಿಕ ಒಳ ಒತ್ತಡಗಳು ಹಾಗು ಅವು ಧರಿಸುತ್ತಿರುವ ಮರುರೂಪಗಳಿಂದಾಗಿ 'ವಾಟ್ಸ ಇನ್ ಎ ನೇಮ್' ಕಥೆ ಕಾಡುವ ಗುಣವನ್ನು ಪಡೆದಿದೆ. ಇದರಲ್ಲಿ ಅವರ ವೈಚಾರಿಕ ಗುಣ ಕೃತಕ ಅನಿಸುವುದಿಲ್ಲ. ಕಂಡರೂ ಕಾಣದಂತೆ ಇರುವ 'ನಗರ ಜಾತೀಯತೆ' ಇಲ್ಲಿ ಮುನ್ನೆಲೆಗೆ ಬಂದಿದೆ. ಅನಗತ್ಯ ವಿವರಗಳಿಲ್ಲದ ಮತ್ತು ಸರಾಗ ನಿರೂಪಣೆಯು ಇಲ್ಲಿ ಮುಖ್ಯವೇ. ತನ್ನ ಬದುಕಿನ ಓಘಕ್ಕೆ 'ಹರಿಜನ' ಎಂಬ ಹೆಸರು ಅಡ್ಡಿಯಾಗುತ್ತಿದೆ ಎಂದು ಭಾವಿಸುವ ವ್ಯಕ್ತಿ ಇಲ್ಲಿದ್ದಾನೆ. ಇವನು ಯುವಕ. ಇಲ್ಲಿ 'ಅಸಂಗತ ಭಾವ' ಮತ್ತು 'ಕಣ್ಣೆದುರುಗಿನ ಸುಡು ವಾಸ್ತವ'ಗಳು ಎದುರು-ಬದುರಾಗಿವೆ. ನಗರದ ಜೀವನ ಶೈಲಿಗೆ ಒಗ್ಗಿಕೊಳ್ಳುವ ರೀತಿಗೆ ಅಥವಾ ತನ್ನ ಬದುಕನ್ನು ರೂಪಿಸಿಕೊಳ್ಳುವ ಒತ್ತಡಕ್ಕೋ ಹೆಸರನ್ನು ಬದಲಿಸಿಕೊಳ್ಳುವ ತೀರ್ಮಾನಕ್ಕೆ ಬರುತ್ತಾನೆ. ಆದರೆ, 'ಹರಿಜನ' ಎಂಬ ಹೆಸರಿನ ಹಿಂದೆ ಇರುವ ಪರಂಪರೆ ಮತ್ತು ಮುಗ್ಧತೆ ಅವನಿಗೆ ಮುಖ್ಯವಾಗಲಾರವು. ದಲಿತತನವನ್ನು ಕಸಿಯುವುದು ಹೆಸರೋ? ಅಥವ ತನ್ನ ಸುತ್ತಣ ಕ್ರೂರತೆಯೋ? ಈ ಪ್ರಶ್ನೆಗಳನ್ನು ಗಂಭೀರವಾಗಿ ಕೇಳಿಕೊಳ್ಳುವಂತೆ ಕಥೆ ಮಾಡುತ್ತದೆ. ಇಂಥ ಕಡೆ ಜಾಗತೀಕರಣ, ಆಧುನಿಕ ಮುಂತಾದ ಪರಿಭಾಷೆಗಳೂ ಹೇಗೆ ನೆರವಾಗಬಲ್ಲವು ಎಂಬುದು ಕಷ್ಟವೇ ಆಗಿದೆ.




ದಯಾನಂದ ತಮ್ಮ ಅನುಭವ ಲೋಕವನ್ನು ಮತ್ತಷ್ಟು ನಿಕಷಕ್ಕೆ ತೆರೆದುಕೊಳ್ಳಬೇಕು. ಅವರ ಕಥೆಗಳಲ್ಲಿ ಇಬ್ಬಗೆಯ ದಾರಿಗಳಿವೆ. ಕಥೆಗಾರನೊಬ್ಬ ಕಲ್ಪಿತ ಜಗತ್ತಿನಿಂದ ಹೆಕ್ಕಿ ಆವಾಹಿಸಿಕೊಂಡ ಅನುಭವಗಳನ್ನು ಕಥೆಗಳಾಗಿಸುವುದು. ಇವುಗಳಿಗೆ ಶಕ್ತವಾದ ಕಾಣ್ಕೆಯನ್ನು ತುಂಬಬಹುದು. ಮತ್ತೊಂದು, ದಿನನಿತ್ಯ ನಮ್ಮ ಕಿವಿಗಳು ಹೆಚ್ಚು ಕೇಳಿಸಿಕೊಳ್ಳುವ ಅಥವಾ ಕೇಳಿದ 'ಸುದ್ದಿ'ಗಳು ಕಥೆಗಳಾಗುವುದು. ಈ ಬಗೆಯ ಸುದ್ದಿಗಳು ಕಥೆಗಳಾಗಬಾರದು ಎಂಬುದಿಲ್ಲ; ಆದರೆ ಅವುಗಳು ಕೇವಲ ಸುದ್ದಿಗಳಾಗಬಾರದು. ದಯಾನಂದ ಮೊದಲನೆಯ ದಾರಿಯನ್ನು ಆರಿಸಿಕೊಂಡರೆ ಒಳಿತು. ವೈಚಾರಿಕತೆ ಎಂಬುದು ನಿರೂಪಣಾ ಕ್ರಮದಲ್ಲೇ ಇರುತ್ತದೆ. ಅದನ್ನು ಹೇಗೆ ನಿರ್ವಹಣೆ ಮಾಡಬೇಕು ಎಂಬುದೇ ಸವಾಲು. ಹಲವು ಬಾರಿ ಒತ್ತಡದ ವೈಚಾರಿಕತೆಯನ್ನು ಹೇಳುವುದಕ್ಕಿಂತ ಆ ಸಂದರ್ಭದ ಬದುಕಿನಲ್ಲಿ ಬರುವ ಸಂಕಟ, ಹತಾಶೆ, ಪ್ರೇಮ ಮತ್ತು ದುಃಖಗಳನ್ನು ಅರ್ಥಮಾಡಿಕೊಳ್ಳುವ ವಿವರಗಳು ಬಂದರೂ ಸಾಕು. ನಿದರ್ಶನಕ್ಕೆ 'ಬುದ್ಧನ ಕಿವಿ' ಕಥೆ. ನಿರೂಪಣೆ, ಭಾಷೆಯ ಅಚ್ಚುಕಟ್ಟುತನದಿಂದ ಮನುಷ್ಯನ ಸತ್ಯಗಳನ್ನು ಬೆತ್ತಲುಗೊಳಿಸಲು ಈ ಕಥೆ ಹೊರಟಿದೆ. ಆದರೆ ಇಂಥ ಕಡೆ ಕಥೆ ಲೇಖನ ಸ್ವರೂಪಕ್ಕೋ, ಪ್ರಬಂಧ ಧಾಟಿಗೋ ಹೊರಳುವ ಅಪಾಯವನ್ನು ದಯಾನಂದ ಗಮನಿಸಬೇಕು. ಮೇಲಿನ ಕಥೆಗಾರರು ಕೇವಲ ದಲಿತ ಬದುಕನ್ನು ಮಾತ್ರ ಚಿತ್ರಿಸುತ್ತಿಲ್ಲ. ಅದೇ ಬದುಕು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಪರಿಯನ್ನು ಅಭಿವ್ಯಕ್ತಿಸುತ್ತಿದ್ದಾರೆ. ದಲಿತತ್ವದ ಸಾಧನೆಗಳು ಸೀಮಿತ ಪರಿಕರಗಳಿಂದ ಕಂಡುಬರುತ್ತಿವೆ ಎಂಬುದು ತಪ್ಪು ಕಲ್ಪನೆ. ಎಂದಿಗಿಂತ ಇಂದು ಶಿಕ್ಷಣ ಮತ್ತು ಉದ್ಯೋಗ ದಲಿತತ್ವವನ್ನು ಸಾಕಷ್ಟು ಹಿಗ್ಗಿಸಿದೆ. ಹೊಸ ಕಥೆಗಾರರಲ್ಲಿ ಜಾತಿಯ ಮರುರೂಪಗಳು ಭಿನ್ನರೀತಿಯಲ್ಲೇ ಕಾಣಿಸಿಕೊಳ್ಳುತ್ತಿವೆ.

ಉಳಿದ ಭಾಗ ಮುಂದಿನ ಸಂಚಿಕೆಗೆ...